# ರಂಗ ಶಂಕರ

(ದ ಸಂಕೇತ್ ಟ್ರಸ್ಟ್‌ನ ಒಂದು ಅಂಗ)

## ಕೆಲಸ ಮಾಡವಲ್ಲಿ ಲೈಂಗಿಕ ಕಿರುಕುಳ ನಿರೋಧ ಕಾಯಿದೆ ನೀತಿಪತ್ರ

### I ಉದ್ದೇಶ

ಭಾರತ ಸಂವಿಧಾನದ ವಿಧಿ 19(1)(ಜಿ) ಮತ್ತು ವಿಧಿ 21, ಮತ್ತು 2013ರಲ್ಲಿ ನಮೂದಿಸಿದ ಕಾರ್ಯಪರಿಸರದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆಗಟ್ಟುವ, ನಿಷೇಧಿಸುವ, ಪರಿಹಾರ ಒದಗಿಸುವ) ಕಾಯಿದೆಗನುಗುಣವಾಗಿ ರಂಗ ಶಂಕರ ತನ್ನ ಜೊತೆಗೂಡಿರುವ ಎಲ್ಲರಿಗೂ ಸುರಕ್ಷಿತ, ಘನತೆಯ, ಕಿರುಕುಳ ರಹಿತವಾದ ಕಾರ್ಯಪರಿಸರವನ್ನು ಕೊಡಮಾಡುವುದಕ್ಕೆ ಬದ್ಧವಾಗಿದೆ. ಈ ನೀತಿಪತ್ರ ಲೈಂಗಿಕ ಬೇಧಭಾವವಿಲ್ಲದೇ ಸರ್ವರಿಗೂ ಅನ್ವಯಿಸಿ, ಯಾವುದೇ ರೀತಿಯ ಲೈಂಗಿಕ ಕಿರುಕುಳದಿಂದ ರಕ್ಷಣೆಯನ್ನು ನೀಡುವತ್ತ ರೂಪಿಸಲಾಗಿದೆ. ಇದಕ್ಕಾಗಿ ದೂರುಗಳನ್ನು ಪಡೆದು ಅದಕ್ಕೆ ಪರಿಹಾರ ಒದಗಿಸಲು ಒಂದು ಆಂತರಿಕ ಸಮಿತಿಯನ್ನು (ಐಸಿ) ರೂಪಿಸಿದೆ. ಲೈಂಗಿಕ ಕಿರುಕುಳ ಕಾನೂನು ಬಾಹಿರವಾಗಿರುವುದು ಅಲ್ಲದೇ, ರಂಗ ಶಂಕರ ನಂಬಿರುವ ಮೂಲ ಮೌಲ್ಯಗಳಿಗೂ ವಿರುದ್ಧವಾಗಿದೆ. ಲೈಂಗಿಕ ಕಿರುಕುಳ ಮುಕ್ತವಾದ ಕೆಲಸದ ವಾತಾವರಣದಲ್ಲಿ ಮತ್ತು ವ್ಯಕ್ತಿಯ ಘನತೆಯಯ ಮೇಲೆ ಹಸ್ತಕ್ಷೇಪ ಮಾಡುವುದಲ್ಲದೇ, ಕಾನೂನು ಬಾಹಿರವೂ ಆಗಿದೆ. ಈ ರೀತಿಯ ವರ್ತನೆಯನ್ನು ರಂಗ ಶಂಕರ ಯಾವ ರೀತಿಯಿಂದಲೂ ಸಹಿಸುವುದಿಲ್ಲ.

### II ವ್ಯಾಪ್ತಿ

*i.* ಕಾರ್ಯಪರಿಸರದಲ್ಲಿ ಲೈಂಗಿಕ ಕಿರುಕುಳ ಎಂದರೇನು?

ಲಿಂಗ, ಲೈಂಗಿಕ ದೃಷ್ಟಿಕೋನ, ಲೈಂಗಿಕವಾಗಿ ಗುರುತಿಸಿಕೊಳ್ಳುವ ವಿಷಯದಲ್ಲಿ ಆಗಬಹುದಾದ ಮುಜುಗರ ಮತ್ತು ತೊಂದರೆಯನ್ನು ಲೈಂಗಿಕ ಕಿರುಕುಳವೆಂದು ಪರಿಭಾಷಿಸಲಾಗಿದೆ. ಅಪರೋಕ್ಷವಾಗಿ ಅಥವಾ ನೇರವಾಗಿ ಅನಪೇಕ್ಷಿತ ಲೈಂಗಿಕ ವ್ಯವಹಾರ ಇದರಲ್ಲಿ ಸೇರಿದೆ. ಉದಾಹರಣೆಗೆ:

a) ದೈಹಿಕ ಸ್ಪರ್ಶ ಅಥವಾ ಸಾಮೀಪ್ಯ;
b) ಲೈಂಗಿಕ ಕ್ರಿಯೆಯ ಪ್ರತಿಫಲ, ಸಮಾಧಾನಗಳನ್ನು ಬೇಡುವುದು;
c) ಲೈಂಗಿಕ ಟಿಪ್ಪಣಿಗಳನ್ನು ಮಾಡುವುದು;
d) ಅಶ್ಲೀಲ ಸಾಹಿತ್ಯ, ದೃಶ್ಯಗಳನ್ನು ತೋರಿಸುವುದು;
e) ದೈಹಿಕವಾಗಿ ಅಥವಾ ಮಾತಿನ ಮೂಲಕ ಅಥವಾ ವರ್ತನೆಯಿಂದ ಲೈಂಗಿಕವೆನ್ನಿಸುವಂತ ಅನಪೇಕ್ಷಿತ ನಡೆನುಡಿ.

ಈ ಕೆಳಗಿನ ಬಿಂದುಗಳನ್ನೊಳಗೊಂಡು ಅದನ್ನೂ ಮೀರಿದ ವಿಸ್ತಾರವಾದ ವ್ಯಾಪ್ತಿಯಲ್ಲಿ ಲೈಂಗಿಕ ಕಿರುಕುಳದ ವ್ಯಾಖ್ಯಾನವನ್ನು ರಂಗ ಶಂಕರ ಗಮನಿಸುತ್ತದೆ:

f) ವಿಶೇಷ ಸವಲತ್ತುಗಳ ಆಶ್ವಾಸನೆ
g) ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸುವ ಬೆದರಿಕೆ
h) ಪ್ರಸ್ತುತ ಅಥವಾ ಭವಿಷ್ಯದ ನೌಕರಿಯ ಬಗ್ಗೆ ಬೆದರಿಕೆ
i) ದಿನನಿತ್ಯದ ಕೆಲಸದಲ್ಲಿ ತೊಡಕುಂಟುಮಾಡುವುದು (ಲೈಂಗಿಕ ಟಿಪ್ಪಣಿ, ಅಥವಾ ಸಣ್ಣಪುಟ್ಟ ವಿಷಯಗಳಲ್ಲೂ ಹಸ್ತಕ್ಷೇಪ)
j) ಅವಮಾನಕರವಾಗಿ ನಡೆಸಿಕೊಳ್ಳುವುದು

ಕಿರುಕುಳ ಕೇವಲ ಒಂದು ಅಥವಾ ಅನೇಕ ಪ್ರಸಂಗಗಳಿಗೆ ಸಂಬಂಧಿಸಿರರಬಹುದು. ಲೈಂಗಿಕ ಪ್ರತಿಫಲಾಪೇಕ್ಷೆಯನ್ನು ಒಪ್ಪಿದ್ದರಿಂದ ಅಥವಾ ನಿರಾಕರಿಸಿದ್ದರಿಂದ, ದಿನನಿತ್ಯದ ಕಾರ್ಯ ಪರಿಸರದಲ್ಲಿ ಬೆದರಿಕೆ ಮತ್ತು ಅಸಹಕಾರದತ್ತ ತಿರುಗಬಹುದು. ಆದರೆ ಸಾಮಾನ್ಯವಾಗಿ, ದಿನನಿತ್ಯ ಕೆಲಸವನ್ನು ಹಂಚುವ, ಮೌಲ್ಯಮಾಪನ ಮಾಡುವ, ಸಲಹೆ ನೀಡುವ, ಶಿಸ್ತನ್ನು ಪಾಲಿಸುವ, ಕೆಲಸದ ಭಾಗವಾಗಿ ಯಾವುದೇ ಶಿಸ್ತುಬದ್ಧ ಕ್ರಮವನ್ನು ಸಹಜವಾಗಿ ಕೈಗೊಂಡಾಗ ಅದನ್ನು ಲೈಂಗಿಕ ಕಿರುಕುಳ ಎಂದು ವಿವರಿಸಲಾಗದು.

*ii* ಈ ನೀತಿಯ ಆಯಾಮ ಮತ್ತು ವ್ಯಾಪ್ತಿ

ಈ ನೀತಿಯು **ರಂಗ ಶಂಕರ** ಕಾರ್ಯಕಲಾಪಗಳಲ್ಲಿ ಜೊತೆಗೂಡುವ – ಅದರೊಂದಿಗೆ ಸಂಬಂಧವನ್ನು ಬೆಳೆಸುವ-

a) ಸಹ ನೌಕರರು, ಗ್ರಾಹಕರು, ವಿತರಕರು, ಸಲಹೆಗಾರರು, ಇಂಟರ್ನ್, ಸ್ವಯಂಸೇವಕರು, ತಾತ್ಕಾಲಿಕ ಅಥವಾ ಪೂರ್ಣಕಾಲಿಕ ಹಾಗೂ ಸಂಬಳ/ ಮಜೂರಿ ಪಡೆವ/ಪಡೆಯದಿರುವ ಗುತ್ತಿಗೆ ಕೆಲಸಗಾರರು, ಕಾರ್ಯಾಗಾರದಲ್ಲಿ ಭಾಗಿಯಾಗಿರುವ ವ್ಯಕ್ತಿಗಳು, ಸಂದರ್ಶಿಸುತ್ತಿರುವ ಅಥವಾ ಆಹ್ವಾನಿತ ಕಲಾವಿದರು, ಆವರಣದ ಸವಲತ್ತುಗಳನ್ನು ಬಾಡಿಗೆಗೆ ಪಡೆದು ಕಾರ್ಯಕ್ರಮ ನಡೆಸಿಕೊಡುತ್ತಿರುವ ಕಲಾವಿದರು, ಪ್ರೇಕ್ಷಕ ವರ್ಗ–ಹೀಗೆ ಇಲ್ಲಿ ಉದ್ಯೋಗ ಕೈಗೊಳ್ಳುವ ಅಥವಾ ಕೆಲಸದ ಕಾರಣವಾಗಿ ಸಂಬಂಧ ಏರ್ಪಟ್ಟಿರುವ ಯಾವುದೇ–ವ್ಯಕ್ತಿಯ ಜೊತೆ ಕಿರುಕುಳ ಎಸಗಿದರೆ, ಅಥವಾ ಬೇರೊಂದು ವ್ಯಕ್ತಿಯ ಕಿರುಕುಳಕ್ಕೆ ಕಾರಣರಾದಾಗ;
b) ವ್ಯಕ್ತಿಯೊಬ್ಬರು, ಯಾವುದೇ ಲಿಂಗಕ್ಕೆ ಸೇರಿದ ಮತ್ತೊಬ್ಬ ವ್ಯಕ್ತಿಯ ಜೊತೆ ಲೈಂಗಿಕ ಕಿರುಕುಳ ಎಸಗಿದಾಗ;
c) ಒಂದೇ ಲಿಂಗಕ್ಕೆ ಸೇರಿದ ಇಬ್ಬರ ನಡುವೆ ಲೈಂಗಿಕ ಕಿರುಕುಳದ ಅಪಾದನೆ ಉಂಟಾದಾಗ;
d) ಇದು ಕಲೆ-ಸಂಸ್ಕೃತಿಯ ಅನುಭೂತಿಯನ್ನು ಸಾರ್ವಜನಿಕರಿಗೆ ನೀಡುವ ಕೇಂದ್ರವಾದ್ದರಿಂದ, ಆವರಣವನ್ನು ಬಾಡಿಗೆಗೆ ಪಡೆದ ತಂಡಗಳು, ತಾಂತ್ರಿಕ ವರ್ಗ, ಕಲಾವಿದರು ಎಲ್ಲರೂ ಈ ನೀತಿಗೆ ಅನುಗುಣವಾಗಿ ವರ್ತಿಸುವ ಅಪೇಕ್ಷೆಯನ್ನು **ರಂಗ ಶಂಕರ** ಹೊಂದಿದೆ. ಒಂದೇ ಆವರಣದಲ್ಲಿ ಭಿನ್ನ ರೀತಿಯ ಜನರು ಕಾರ್ಯನಿರತರಾಗಿರುವುದನ್ನು ಪರಿಗಣಿಸಿ, ಲೈಂಗಿಕ ಕಿರುಕುಳ ನೌಕರ ವರ್ಗವನ್ನೂ ಮೀರಿ ಸಂಭವಿಸ ಬಹುದು ಎನ್ನುವುದನ್ನು ಗುರುತಿಸುತ್ತದೆ. **ರಂಗ ಶಂಕರ** ಆವರಣದಲ್ಲಿ ಯಾರಿಂದಲೇ ಆಗಲಿ ಲೈಂಗಿಕ ಕಿರುಕುಳವಾದಲ್ಲಿ, ಆ ದೂರನ್ನು ಸ್ವೀಕರಿಸಿ, ನೌಕರರಲ್ಲದವರನ್ನೂ ಆವರಣದಿಂದ ಹೊರಹಾಕುವ, ಬಾಡಿಗೆ/ಗುತ್ತಿಗೆಯನ್ನು ರದ್ದು ಮಾಡುವ, ಕಾನೂನಿನನ್ವಯ ತಕ್ಕ ವಿಭಾಗ/ ಅಧಿಕಾರವರ್ಗಕ್ಕೆ ಫಿರ್ಯಾದು ಮಾಡುವುದನ್ನೊಳಗೊಂಡು ಯಾವುದೇ ಪರಿಹಾರ ಮಾರ್ಗವನ್ನು ಕಂಡುಕೊಳ್ಳುವ ಹಕ್ಕು ಐಸಿಗೆ ಇದೆ;
e) ಕೆಲಸದ ಕಾರಣವಾಗಿ ರಂಗ ಶಂಕರದ  ಸಿಬ್ಬಂದಿ ಹಾಜರಿರಬಹುದಾದ ಸ್ಥಳದಲ್ಲಿ–ರಂಗ ಶಂಕರದ ಆವರಣ, ಪ್ರೇಕ್ಷಾಗೃಹ, ಕಾರ್ಯಕ್ರಮ ನಡೆಯುವ ಜಾಗ, ಆವರಣದ ಹೊರಗಿರುವ ತರಬೇತಿ/ಸಭಾ ಕೇಂದ್ರ, ಪ್ರಯಾಣಿಸುತ್ತಿರುವ ವಾಹನ ಅಥವಾ ರಂಗ ಶಂಕರ ಏರ್ಪಡಿಸಿರುವ ವಸತಿ–ಹೀಗೆ ಯಾವುದೇ ಸ್ಥಳದಲ್ಲಿ ಲೈಂಗಿಕ ಕಿರುಕುಳ ಉಂಟಾದಾಗ;

f) ಕೆಲಸದ ಸಮಯದಲ್ಲಿ ಅಥವಾ ಸಮಯವನ್ನು ಮೀರಿ ಲೈಂಗಿಕ ಕಿರುಕುಳ ಉಂಟಾದಾಗ;
g) ಸಂಸ್ಥೆ ಒದಗಿಸಿಕೊಟ್ಟಿರುವ ಈ-ಮೇಲ್ ಐಡಿ, ಮೊಬೈಲ್ ಫೋನು, ಲ್ಯಾಪ್‌ಟಾಪ್, ಕಾರ್ಯಾಲಯದ ಕಾಗದ ಪತ್ರ, ಆಂತರಿಕ ಅಂತರ್ಜಾಲ ಅಥವಾ ಸಂವಹನಾ ತಂತ್ರಾಂಶಗಳ ಮೂಲಕ ಲೈಂಗಿಕ ಕಿರುಕುಳ ಉಂಟಾದಾಗ;

ಹೀಗೆ ಎಲ್ಲ ಸಂದರ್ಭಗಳಲ್ಲಿಯೂ ಈ ನೀತಿ ವರ್ತಿಸುತ್ತದೆ.

## III ಕಾರ್ಯವಿಧಾನ

*i* ಆಂತರಿಕ ಸಮಿತಿ *[IC]* (ಈ ಹಿಂದಿನ ಆಂತರಿಕ ದೂರುಗಳ ಸಮಿತಿ *[ICC})*

a) 2013ರಲ್ಲಿ ನಮೂದಿಸಿದ ಕಾರ್ಯಪರಿಸರದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವ, ನಿಷೇಧಿಸುವ, ಪರಿಹಾರ ಒದಗಿಸುವ) ಕಾಯಿದೆ ಮತ್ತು ಲೈಂಗಿಕ ಕಿರುಕುಳ (ತಡೆಗಟ್ಟುವ, ನಿಷೇಧಿಸುವ, ಪರಿಹಾರ ಒದಗಿಸುವ) ನಿಯಮಾವಳಿಗನುಗುಣವಾಗಿ **ರಂಗ ಶಂಕರ** ಒಂದು ಆಂತರಿಕ ಸಮಿತಿಯನ್ನು(ಐಸಿ-IC) ರೂಪಿಸಿದೆ.
b) ಆಂತರಿಕ ಸಮಿತಿಗೆ **ರಂಗ ಶಂಕರ**ಕ್ಕೆ ಸೇರಿದ ಮಹಿಳಾ ಉನ್ನತಾಧಿಕಾರಿಯೊಬ್ಬರು ಅಧ್ಯಕ್ಷರಾಗಿರುತ್ತಾರೆ, ಜೊತೆಗೆ ಕನಿಷ್ಠ ಇಬ್ಬರು (ಪುರುಷ ಅಥವಾ ಮಹಿಳಾ) ಸದಸ್ಯರು, ಮತ್ತು ಹೊರಗಿನಿಂದ ಆಹ್ವಾನಿಸಿದ ವಿಷಯ ಪರಿಣತರು ಸದಸ್ಯರಾಗಿರುತ್ತಾರೆ. ಸಮಿತಿಯಲ್ಲಿ ಕಡ್ಡಾಯವಾಗಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರಿರುತ್ತಾರೆ.
c) ಐಸಿಯ ಅಧ್ಯಕ್ಷರು ಮತ್ತು ಸಮಿತಿಯ ಸದಸ್ಯರನ್ನು **ರಂಗ ಶಂಕರ** ನಿರ್ವಹಣಾ ಮಂಡಳಿ ಮೂರು ವರ್ಷಗಳ ಕಾಲಾವಧಿಗೆ ನೇಮಿಸುತ್ತದೆ.
d) ನಿಯಮಿತವಾಗಿ ಐಸಿಯ ಸದಸ್ಯರಿಗೆ ನ್ಯಾಯಸಮ್ಮತ ಮತ್ತು ಸಮತೋಲನದಿಂದ ಕೂಡಿದ ತನಿಖೆ ನಡೆಸುವ ತರಬೇತಿಯನ್ನು ನೀಡಲಾಗುತ್ತದೆ.
e) ಐಸಿ ಸದಸ್ಯರಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಿತಾಸಕ್ತಿಯ ಬಿಕ್ಕಟ್ಟಿದ್ದರೆ, ಅವರು ಈ ಸಮಿತಿಯ ಕಾರ್ಯಕಲಾಪಗಳಿಂದ ಮುಕ್ತರಾಗುತ್ತಾರೆ.
f) ಈ ನಿಯಮವನ್ನು ಉಲ್ಲಂಘಿಸುವ ಯಾವುದೇ ಐಸಿ ಸದಸ್ಯರನ್ನು ತಕ್ಷಣ ಬರ್ಖಾಸ್ತು ಮಾಡಲಾಗುತ್ತದೆ.

g) 1908ರ ಸಿವಿಲ್ ಪ್ರೊಸೀಜರ್ ಕಟ್ಟುಪಾಡಿದನಂತೆ ಸಿವಿಲ್ ನ್ಯಾಯಾಲಯಗಳಿಗೆ ಸಲ್ಲುವ ಅಧಿಕಾರ ವ್ಯಾಪ್ತಿ ಐಸಿಗೂ ಇರುತ್ತದೆ. ಹೀಗಾಗಿ ಸಾಕ್ಷ್ಯನೀಡಲು ಜನರನ್ನು ಕರೆಸುವ, ತನಿಖೆಗೆ ಸಲ್ಲುವ ದಾಖಲೆಗಳನ್ನು ಪರಿಶೀಲಿಸುವ ಮತ್ತು ಅಸಹಕಾರದ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವನ್ನು ಐಸಿ ಹೊಂದಿರುತ್ತದೆ.

*ii.* ದೂರು

*committee@rangashankara.in* ಈಮೇಲ್ ವಿಳಾಸಕ್ಕೆ ಸಂದೇಶ ಕಳುಹಿಸುವ ಮೂಲಕ ಬಾಧಿತ ವ್ಯಕ್ತಿ/ಗಳು ತಮ್ಮ ದೂರುಗಳನ್ನು ದಾಖಲಿಸಬಹುದು. ಇದು ಸಾಧ್ಯವಾಗದಿದ್ದಲ್ಲಿ ಆ ವ್ಯಕ್ತಿ ಲಿಖಿತ ದೂರನ್ನು ಸಲ್ಲಿಸಲು ಎಲ್ಲ ಸಹಾಯವನ್ನೂ ಐಸಿ ಒದಗಿಸಿಕೊಡುತ್ತದೆ. ಅನಾಮಿಕ ದೂರುಗಳನ್ನು ಐಸಿ ಪರಿಗಣಿಸುವುದಿಲ್ಲ.

a) ಕಿರುಕುಳ ನಡೆದ 3 ತಿಂಗಳುಗಳ ಒಳಗಾಗಿ ದೂರು ಸಲ್ಲಿಸಬೇಕು. ಅಗತ್ಯ ಕಂಡುಬಂದಲ್ಲಿ ಈ ಕಾಲಮಿತಿಯನ್ನು ಐಸಿ ಮತ್ತೊಂದು ಮೂರು ತಿಂಗಳುಗಳ ಕಾಲಕ್ಕೆ ವಿಸ್ತರಿಸಬಹುದು.
b) (ಕಿರುಕುಳದ ದೂರು ದಾಖಲಿಸುತ್ತಿರುವ) ಆಪಾದಿತರ (ಹೆಸರು, ಸಂಪರ್ಕ ವಿಳಾಸ), ಸಾಕ್ಷಿಗಳ ವಿವರಗಳು, ದಿನಾಂಕ, ಸಮಯ, ಸ್ಥಳ ಕಿರುಕುಳದ ವಿವರಗಳು, ಮತ್ತು ಇತರ ಯಾವುದೇ ದಾಖಲೆ ಸಾಕ್ಷ್ಯಗಳನ್ನು ಐಸಿಗೆ ಸಲ್ಲಿಸಬೇಕು.
c) ದೂರು ಕೊಡುವವರು, ತಮ್ಮ ತಕ್ಷಣದ ಮಾನಸಿಕ ಕ್ಷೋಭೆಯನ್ನು ಸಂಭಾಳಿಸಲು, ವಿಚಾರಣೆ ನಡೆಯುವ ಕಾಲದಲ್ಲಿ ತಮ್ಮ ಖಾತೆಯಲ್ಲಿರುವ ರಜಾ, ಅಥವಾ ಕೆಲಸದ ಸಂದರ್ಭದ ಬದಲಾವಣೆಯನ್ನು ಬಯಸಬಹುದು. ದೂರು ಕೊಟ್ಟವರನ್ನು, ಸಾಕ್ಷಿಗಳನ್ನು ಕಾಪಾಡುವ ಸಲುವಾಗಿ ಐಸಿ ಯಾವುದೇ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳಬಹುದು.
d) ಲೈಂಗಿಕ ಕಿರುಕುಳದಲ್ಲಿ ತೊಡಗಿರುವ, ಅಥವಾ ಹುಸಿ ದೂರುಗಳನ್ನು ದುರುದ್ದೇಶದಿಂದ ದಾಖಲಿಸುವ ಯಾವುದೇ ಉದ್ಯೋಗಿಯ ವಿರುದ್ಧ ಕೆಲಸದಿಂದ ಅಥವಾ ಸೇವೆಯಿಂದ ವಜಾ ಮಾಡುವುದನ್ನೂ ಒಳಗೊಂಡು ಯಾವುದೇ ಶಿಸ್ತುಬದ್ಧ ಕ್ರಮವನ್ನು ಕೈಗೊಳ್ಳಲಾಗುವುದು.

e) ಟ್ರಸ್ಟಿಯ ವಿರುದ್ಧ ದೂರು ಬಂದಲ್ಲಿ, ಐಸಿ ಮೂಲಕ ನೇಮಿಸಲ್ಪಡುವ, ಟ್ರಸ್ಟ್‌ಗೆ ಸಂಬಂಧಪಡದ ಹಾಗೂ ಟ್ರಸ್ಟ್‌ನಲ್ಲಿರದ ವ್ಯಕ್ತಿಯ ಮೂಲಕ ತನಿಖೆಯನ್ನು ಕೈಗೊಳ್ಳಲಾಗುವುದು.

f) ಲೈಂಗಿಕ ಕಿರುಕುಳದ ವಿಷಯದಲ್ಲಿ **ರಂಗ ಶಂಕರ**ದ ಆಂತರಿಕ ಕಾರ್ಯಪದ್ಧತಿ ಏನೇ ಇದ್ದರೂ, ಬಾಧಿತ ವ್ಯಕ್ತಿಯು **ರಂಗ ಶಂಕರ**ದ ಹೊರಗೆ, ನಾಡಿನ ಕಾನೂನಿಗನುಗುಣವಾಗಿ, ನಿಗದಿತ ಅಧಿಕಾರಿಗಳೆದುರು ಸಮಾನಾಂತರವಾಗಿ ದೂರು ನೀಡುವ ಹಕ್ಕನ್ನು ಸದಾ ಹೊಂದಿರುತ್ತಾರೆ.

g) ದೂರು ಕೊಡುವ ವ್ಯಕ್ತಿ ತನಿಖೆಗೆ ಬದಲಾಗಿ ಸಂಧಾನವನ್ನು ಮಾಡಿಸುವ ಕೋರಿಕೆ ಮಂಡಿಸಬಹುದು. ಭಿನ್ನ ಪಕ್ಷಗಳ ನಡುವೆ ಸಂಧಾನ ಮಾಡಿಸುವ ವಿಷಯದಲ್ಲಿ ಐಸಿಯ ಸದಸ್ಯರು ತರಬೇತಿಯ ಮೂಲಕ ಪರಿಣತಿಯನ್ನು ಪಡೆದಿರುತ್ತಾರೆ. ಸಂಧಾನ ಯತ್ನಗಳು ವಿಫಲವಾದರೆ, ಮತ್ತು ತನಿಖೆಯನ್ನ ಕೈಗೊಂಡು ತನ್ನ ಸಲಹೆಗಳನ್ನು ನೀಡುವ ಅಧಿಕಾರ ಐಸಿಗೆ ಇದೆ.

h) ಮೊದಲ ಹಂತದ ತನಿಖೆಯಿಂದ ಸಂತುಷ್ಟರಾಗದ ವ್ಯಕ್ತಿಗಳು ಸವಿಸ್ತಾರವಾದ ತನಿಖೆಯನ್ನು ಕೋರುವ ಹಕ್ಕನ್ನು ಹೊಂದಿರುತ್ತಾರೆ.

*iii* ಪ್ರಕ್ರಿಯೆಯ ಸಮಯಸೂಚಿ

a) ದೂರು ತಲುಪಿದ ಏಳು ದಿನಗಳೊಳಗಾಗಿ ಅದರ ಒಂದು ಪ್ರತಿಯನ್ನು ಐಸಿ ಆಪಾದಿತ ವ್ಯಕ್ತಿ/ವ್ಯಕ್ತಿಗಳ ಜೊತೆ ಹಂಚಿಕೊಳ್ಳುತ್ತದೆ. ಹಂಚಿಕೊಂಡ ದಿನದಿಂದ ಹತ್ತು ದಿನಗಳ ಕಾಲಾವಧಿಯೊಳಗಾಗಿ ಉತ್ತರ ನೀಡಬೇಕೆಂದು ಆಪಾದಿತರಿಗೆ ಸೂಚಿಸುತ್ತದೆ.

b) ಎಲ್ಲರಿಗೂ ಸಮಾನಾವಕಾಶ ಕೊಟ್ಟು, ಲೈಂಗಿಕ ಕಿರುಕುಳದ ದೂರಿನ ತನಿಖೆ ಮತ್ತು ವಿಚಾರಣೆಯನ್ನು ನ್ಯಾಯಬದ್ಧವಾಗಿ 90 ದಿನಗಳೊಳಗಾಗಿ ಐಸಿ ಕೈಗೊಳ್ಳುತ್ತದೆ.

c) ಯಾವುದೇ ಪಕ್ಷ ಸತತವಾಗಿ ಐಸಿಯ ಮೂರು ಸಭೆಗಳಿಗೆ ಗೈರುಹಾಜರಾದರೆ, ಐಸಿ ಆ ಪಕ್ಷದ ವಾದವನ್ನು ಕೇಳದೆಯೇ ತೀರ್ಮಾನ ಕೈಗೊಳ್ಳಬಹುದು.

d) ಕಟ್ಟಕಡೆಯ ತನಿಖಾ ಸಭೆಯಾದ ಹತ್ತು ದಿನಗಳೊಳಗಾಗಿ, ಐಸಿಯ ಅಧ್ಯಕ್ಷರು, ಕಾರ್ಯನಿರ್ವಾಹಕ ಟ್ರಸ್ಟಿಗೆ ತನಿಖೆಯಲ್ಲಿ ಕಂಡುಕೊಂಡ ವಿಷಯಗಳು ಮತ್ತು ಐಸಿಯ ಸಲಹೆಗಳಿರುವ ವರದಿಯನ್ನು ಸಲ್ಲಿಸುತ್ತದೆ. ಸೂಕ್ತ ಕ್ರಮ ಕೈಗೊಳ್ಳುವುದು, ಮುಂದೆ ಎಚ್ಚರದಿಂದಿರಬೇಕೆನ್ನುವ ಹಿತವಚನ, ಸಂಧಾನ,

ಮತ್ತು ಉದ್ಯೋಗಿಯನ್ನು ಕೆಲಸದಿಂದ ಹೊರಹಾಕುವ ಮಟ್ಟಿಗೆ ಯಾವುದೇ ರೀತಿಯ ಸಲಹೆಗಳನ್ನು ಐಸಿ ನೀಡಬಹುದು.

e) ಕಾರ್ಯನಿರ್ವಾಹಕ ಟ್ರಸ್ಟಿ, ಐಸಿಯ ಸಲಹೆಗಳ ಮೇಲೆ, ಕ್ರಮವನ್ನು 60 ದಿನಗಳೊಳಗಾಗಿ ಕೈಗೊಳ್ಳಬೇಕು.

f) ಕಾರ್ಯನಿರ್ವಾಹಕ ಟ್ರಸ್ಟಿ, ಕೈಗೊಂಡ ಕ್ರಮಗಳ ವರದಿಯನ್ನು ದೂರು ಕೊಟ್ಟ, ಮತ್ತು ಆಪಾದಿತರಿಬ್ಬರ ಜೊತೆಯೂ ಹಂಚಿಕೊಳ್ಳಬೇಕು.

g) ಈ ವರದಿ ಕೈಸೇರಿದ 90 ದಿನಗಳೊಳಗಾಗಿ, ದೂರು ಕೊಟ್ಟ ವ್ಯಕ್ತಿ, ಅಥವಾ ಆಪಾದಿತರು ಸೂಕ್ತ ಉನ್ನತ ಮಟ್ಟದ ಪ್ರಾಧಿಕಾರಕ್ಕೆ ತಮ್ಮ ಮೇಲ್ಮನವಿಯನ್ನು ಸಲ್ಲಿಸಬಹುದು.

h) ಅಪರಾಧದ ವಿವರಗಳ ಆಧಾರದ ಮೇಲೆ, ಅಪರಾಧ ನಿರೂಪಿಸಲಾದ ಆಪಾದಿತರನ್ನು ದೇಶದ ಕಾನೂನಿನನ್ವಯ ಸೂಕ್ತ ಅಧಿಕಾರಿಗಳಿಗೆ/ಸಂಸ್ಥೆಗಳಿಗೆ ಒಪ್ಪಿಸುವ ಹಕ್ಕು ರಂಗ ಶಂಕರದ ಬಳಿ ಇರುತ್ತದೆ.

i) ಐಸಿಯ ಸಲಹೆಗಳ ಕ್ರಮ ಕೈಗೊಂಡ ಮೇಲೆ, ಆ ಕ್ರಮಗಳನ್ನು ವಿವರಿಸಿ ಐಸಿಗೆ ಒಂದು ವರದಿಯನ್ನು ಕಾರ್ಯನಿರ್ವಾಹಕ ಟ್ರಸ್ಟಿ ಸಲ್ಲಿಸುತ್ತಾರೆ.

## IV **ಉದ್ಯೋಗಿಗಳ ಮತ್ತು ಸಮುದಾಯದ ಜವಾಬ್ದಾರಿಗಳು**

i. ಈ ನೀತಿಯನ್ನು ಓದಿ ಅಂತರ್ಗತ ಮಾಡಿಕೊಳ್ಳುವುದು.

ii. ಈ ವಿಷಯದಲ್ಲಿ ಏರ್ಪಡಿಸುವ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಮತ್ತು ಅನುಮಾನಗಳಿದ್ದರೆ ಕಾರ್ಯನಿರ್ವಾಹಕರಿಂದ ಪರಿಹಾರ ಕಂಡುಕೊಳ್ಳುವುದು.

iii. ಎಲ್ಲ ಕಾಲದಲ್ಲೂ ಘನತೆಯಿಂದ ವರ್ತಿಸಿ, ತಮ್ಮ ವರ್ತನೆಯಿಂದ ಯಾರ ಮೇಲೂ ಲೈಂಗಿಕ ಕಿರುಕುಳ ಜರುಗದಂತೆ ನೋಡಿಕೊಳ್ಳುವುದು.

iv. ಕೆಲಸದ ಸಂದರ್ಭದಲ್ಲಿ ಯಾವುದೇ ರೀತಿಯ ಲೈಂಗಿಕ ದುರ್ವ್ಯವಹಾರ ಕಂಡರೆ ಅದನ್ನು ತಕ್ಷಣವೇ ವರದಿ ಮಾಡುವುದು. ಯಾವುದೇ ಉದ್ಯೋಗಿ, ಅಥವಾ ಸಮುದಾಯದ ಸದಸ್ಯರು ಕೆಲಸದ ಸಂದರ್ಭದಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾದರೆ, ಅದರ ತೀವ್ರತೆಯನ್ನು ಪರಿಗಣಿಸದೇ, ಉದ್ಯೋಗಿಗಳು:

a) ಕಿರುಕುಳ ಎಸಗುತ್ತಿರುವ ವ್ಯಕ್ತಿಗೆ ತಮ್ಮ ಅಸಹಮತಿಯನ್ನು ಸೂಚಿಸಿ, ಕೂಡಲೇ ಆ ರೀತಿಯ ವ್ಯವಹಾರವನ್ನು ನಿಲ್ಲಿಸಬೇಕೆಂದು ಹೇಳಬೇಕು; ಇಲ್ಲವೇ

b) ಈ ವಿಷಯದ ಬಗ್ಗೆ ಕೆಳಕಂಡ ಸಂಪರ್ಕಸಾಧನಗಳ ಮೂಲಕ ತಕ್ಷಣವೇ ಲಿಖಿತ ರೂಪದಲ್ಲಿ ವರದಿ ಮಾಡಬೇಕು:
   - committee@rangashankara.in
   - ಐಸಿ ಯ ಅಧ್ಯಕ್ಷರು ಅಥವಾ ಸದಸ್ಯರು
   - ಟ್ರಸ್ಟಿಗಳು
   - ತಮ್ಮ ಮೇಲಧಿಕಾರಿಗಳು
   - ಸ್ಥಳೀಯ ಫಿರ್ಯಾದು ಕೇಂದ್ರ
   - ಭಾರತ ಸರ್ಕಾರದ ಷೀ-ಬಾಕ್ಸ್

c) ಸಂಬಂಧಪಟ್ಟ ಸಾಕ್ಷ್ಯ ಮತ್ತು ದಾಖಲಾತಿಗಳನ್ನು (ಉದಾಹರಣೆಗೆ, SMS, WhatsApp, ಚಾಟ್‌ಗಳ ಪಠ್ಯ, ಚಿತ್ರಗಳು, ಉಡುಗೊರೆಗಳು ಇತ್ಯಾದಿಗಳನ್ನು) ಜಾಗರೂಕವಾಗಿ ಕಾದಿಟ್ಟುಕೊಂಡಿರಬೇಕು.

v. ಸಹೋದ್ಯೋಗಿ ಅಥವಾ ಸಮುದಾಯದ ಇತರ ವ್ಯಕ್ತಿ ಕಿರುಕುಳಕ್ಕೆ ಒಳಗಾಗುತ್ತಿದ್ದರೆ, ತಕ್ಷಣವೇ ಈ ಸಂಗತಿಯನ್ನು ಐಸಿ ಗೆ ವರದಿ ಮಾಡಲು ಅವರನ್ನು ಪ್ರೋತ್ಸಾಹಿಸಬೇಕು. ಅಥವಾ ತಾವೇ ಐಸಿಗೆ ಈ ವಿಷಯವನ್ನು ತಿಳಿಸಬೇಕು.

vi. ಫಿರ್ಯಾದುಗಾರರಾಗಿ, ಆಪಾದಿತರಾಗಿ, ಸಾಕ್ಷಿಯಾಗಿ, ನೋಡುಗರಾಗಿ ಈ ಘಟನೆಯ ಭಾಗವಾಗಿರುವವರೆಲ್ಲಾ ಐಸಿಯ ಕಾರ್ಯಕಲಾಪಗಳಲ್ಲಿ ಮುದ್ದಾಂ ಸಹಕರಿಸಬೇಕು.

**vii. ಒಬ್ಬರ ಪರ್ಯವೇಕ್ಷಣೆಯಲ್ಲಿ ಇನ್ನೊಬ್ಬರು ಕೆಲಸ ಮಾಡುತ್ತಿರುವ ಉದ್ಯೋಗಿಗಳಲ್ಲಿ, ಪ್ರೇಮಾಂಕುರವಾಗಿ – ಪರಸ್ಪರ ಒಪ್ಪಿಗೆಯ ಸಂಬಂಧವಿದ್ದರೆ, ಈ ಬಗ್ಗೆ ಕಾರ್ಯನಿರ್ವಾಹಕರಿಗೆ ಸೂಚನೆ ಕೂಡುವುದು ಒಳಿತು. ಇದರಿಂದ ಅಧಿಕಾರದ ದುರುಪಯೋಗ ಮತ್ತು ಹಿತಾಸಕ್ತಿಗಳ ವಿರುದ್ಧ ಕೆಲಸ ಮಾಡುವ ಸಂದರ್ಭಗಳನ್ನು ತಪ್ಪಿಸಬಹುದು.**

## V ನಿರ್ವಾಹಕರ ಜವಾಬ್ದಾರಿಗಳು

i. ಸಮುದಾಯದ ಎಲ್ಲರಿಗೂ ತಿಳಿಯುವ ಹಾಗೆ ಈ ನೀತಿಯನ್ನು ಪ್ರಮುಖ ಜಾಗದಲ್ಲಿ ಪ್ರದರ್ಶಿಸುವುದು.
ii. ಉದ್ಯೋಗಿಗಳಿಗೆ, ಗುತ್ತಿಗೆ ಕಾರ್ಮಿಕರಿಗೆ ಮತ್ತು ಕಾರ್ಯನಿರ್ವಾಹಕರಿಗೆ ಕಾಲಾಕಾಲಕ್ಕೆ ತರಬೇತಿ ಏರ್ಪಡಿಸುವುದು.
iii. ನಿಷ್ಪಕ್ಷ ವಿಚಾರಣೆಗೆ ಬೇಕಾದ ಸವಲತ್ತುಗಳನ್ನು ಐಸಿಗೇ ಒದಗಿಸುವುದು.
iv. ಎಲ್ಲ ಕಾರ್ಯಾಚರಣೆ, ದಾಖಲೆ ಮತ್ತು ಕಾರ್ಯತಂತ್ರದ ಗೌಪ್ಯತೆಯನ್ನು ಕಾಪಾಡುವುದು..
v. ಗೌಪ್ಯತೆ ಮತ್ತು ನ್ಯಾಯಯುತ ಪ್ರಕಿಯೆ ಉಲ್ಲಂಘನೆ ಆದಲ್ಲಿ ಅದರ ಬಗ್ಗೆ ಪ್ರಾಮಾಣಿಕವಾಗಿ ಕ್ರಮ ಕೈಗೊಳ್ಳುವುದು.
vi. ಸ್ವೀಕರಿಸಿದ ದೂರುಗಳು, ಪರಿಹಾರ ನೀಡದ ಪ್ರಕರಣಗಳ ಸಂಖ್ಯೆ, ತನಿಖೆಯಾಗದೇ ಉಳಿದ ಪ್ರಕರಣಗಳು, **90** ದಿನಗಳ ಗಡುವನ್ನು ದಾಟಿದ ದೂರುಗಳು, ಕೈಗೊಂಡ ಕ್ರಮ-ಪ್ರಕ್ರಿಯೆ, ನಡೆಸಿದ ತರಬೇತಿ ಕಾರ್ಯಕ್ರಮಗಳು, ಮತ್ತಿತರ ವಿವರಗಳ ವರದಿಯನ್ನು ಜಿಲ್ಲಾ ಅಧಿಕಾರಿಗೆ ಅಥವಾ ಸಂಬಂಧಿತ ವಿಭಾಗಕ್ಕೆ ವರ್ಷಕೊಮ್ಮೆ ಸಲ್ಲಿಸುವುದು.

## VI ಭರವಸೆಗಳು

*i.* ಯಾವುದೇ ಪ್ರತೀಕಾರವಿಲ್ಲ

ಲೈಂಗಿಕ ಕಿರುಕುಳದ ದೂರು ಸಲ್ಲಿಸಿದ, ಅಥವಾ ತನಿಖೆಯಲ್ಲಿ ಸಹಕರಿಸಿದ ಉದ್ಯೋಗಿಗಳು ಮತ್ತು ಸಮುದಾಯದ ಯಾವುದೇ ವ್ಯಕ್ತಿಯ ವಿರುದ್ಧ ಯಾವುದೇ ಪ್ರತೀಕಾರ ಎಸುಗುವುದಿಲ್ಲ. ಹೀಗಿದ್ದರೂ, ಯಾರಿಗಾದರೂ ಪ್ರತೀಕಾರ ವರ್ತನೆಯ ಅನುಭವವಾದಲ್ಲಿ ಮೇಲೆ ವಿವರಿಸಿದ ಸಂಪರ್ಕಸಾಧನಗಳ ಮೂಲಕ ತಮ್ಮ ವಿಭಾಗದ ಮೇಲಧಿಕಾರಿಯ ಗಮನಕ್ಕೆ ತರಬಹುದು. ಯಾವುದೇ ಪ್ರತೀಕಾರದ ಘಟನೆ ಕಂಡುಬಂದಲ್ಲಿ ಅದನ್ನು ಕೈಗೊಂಡವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು. ಪ್ರತೀಕಾರವು ಕಾನೂನುಬಾಹಿರ ಕ್ರಮವಾಗಿದ್ದು, ಪ್ರತಿ ಉದ್ಯೋಗಿ ಮತ್ತು ಸಮುದಾಯದವರನ್ನು ಪ್ರತೀಕಾರದಿಂದ ರಕ್ಷಿಸುವುದಕ್ಕೆ **ರಂಗ ಶಂಕರ** ಬದ್ಧವಾಗಿದೆ.

*ii.* ಗೌಪ್ಯತೆ

ದೂರುಗಳು ಮತ್ತು ವಿಚಾರಣೆಯ ಎಲ್ಲ ಪ್ರಕ್ರಿಯೆಗಳಲ್ಲಿ ಗೌಪ್ಯತೆಯನ್ನು ಕಾಪಾಡಲಾಗುವುದು. ಯಾವುದೇ ಸಂಗತಿಯನ್ನು ಬಿತ್ತರಿಸಬೇಕಾದರೆ, ಅದು ಅತ್ಯವಶ್ಯಕವೆಂದು ಮನದಟ್ಟು ಮಾಡಿಕೊಂಡು – ಎಷ್ಟು ಅವಶ್ಯಕವೋ ಅಷ್ಟು ಮಾತ್ರ ಮಾಹಿತಿಯನ್ನು ಬಿತ್ತರಿಸಲಾಗುತ್ತದೆ. ಐಸಿಯ ಪ್ರತಿ ಸದಸ್ಯರು, ದೂರು ಕೊಟ್ಟವರು, ಆಪಾದಿತರು, ಸಾಕ್ಷಿಗಳೆಲ್ಲರೂ ಈ ಗೌಪ್ಯತೆಯನ್ನು ಗೌರವಿಸಬೇಕೆನ್ನುವ ಸಲಹೆ ನೀಡಲಾಗುತ್ತದೆ.

*iii.* ನ್ಯಾಯಸಮ್ಮತ ಪ್ರಕ್ರಿಯೆ.

**ರಂಗ ಶಂಕರ**ದ ಕಾರ್ಯಪರಿಸರವು ಸುರಕ್ಷಿತವಾಗಿರುವ ಸಲುವಾಗಿ ಬಂದ ಎಲ್ಲ ದೂರುಗಳನ್ನು ಪರಿಗಣಿಸಿ ವಿಚಾರಣೆಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕಾದ ಎಲ್ಲರ ಮಾತುಗಳಿಗೂ ಕಿವಿಗೊಟ್ಟು, ಎಲ್ಲ ದಾಖಲೆಗಳನ್ನೂ ಪರಿಶೀಲಿಸಿ ನ್ಯಾಯಸಮ್ಮತವಾಗಿ, ತಕ್ಕ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

## VII ಹೆಚ್ಚುವರಿ ನಿಬಂಧನೆಗಳು

i. ರಂಗ ಶಂಕರ ಒಂದು ಸಾರ್ವಜನಿಕ ಜಾಗ. ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು, ತಮ್ಮ ಕಲೆ ಮತ್ತು ಸೃಜನಶೀಲತೆಯನ್ನು ಪ್ರದರ್ಶಿಸಲು, ಪ್ರೇಕ್ಷಕರಾಗಿ ಬರುವ ಅಪ್ರಾಪ್ತ ವಯಸ್ಕ ಮಕ್ಕಳನ್ನು ನಾವು ಸ್ವಾಗತಿಸುತ್ತೇವೆ. 18ವರ್ಷಗಳಿಗಿಂತ ಕಿರಿಯರಾದ ಯಾವುದೇ ವ್ಯಕ್ತಿಯ ವಿರುದ್ಧ ಲೈಂಗಿಕ ಕಿರುಕುಳ, ಶೋಷಣೆಯ ಘಟನೆಗಳು ಉಂಟಾದಲ್ಲಿ ಅದನ್ನು 2012ರ ಲೈಂಗಿಕ ಕಿರುಕುಳದಿಂದ ಮಕ್ಕಳನ್ನು ರಕ್ಷಿಸುವ ಕಾಯಿದೆಯನ್ವಯ (POCSO) ತಕ್ಷಣವೇ ಕಾನೂನನ್ನು ಜಾರಿಮಾಡುವ ಅಧಿಕಾರಿಗಳ ಗಮನಕ್ಕೆ ತರುವುದು ಕಡ್ಡಾಯ.

## ಅನುಬಂಧ 1:

| | |
|---|---|
| ಅಧ್ಯಕ್ಷರು | **ಮೌರೀನ್ ಗೊನ್ಸಾಲ್ವಿಸ್, ಕಲಾ ಸಮಾಲೋಚಕರು** |
| ಸದಸ್ಯರು (ಆಂತರಿಕ) | **ಕೆ ಎಂ ಚೈತನ್ಯ, ಚಲನಚಿತ್ರ ನಿರ್ದೇಶಕರು** |
| ಸದಸ್ಯರು (ಆಂತರಿಕ) | **ವೆಂಕಟೇಶ್ ಪ್ರಸಾದ್, ರಂಗಭೂಮಿ ನಟ ಮತ್ತು ನಿರ್ದೇಶಕರು** |
| ಸದಸ್ಯರು (ಸದಸ್ಯರು ಬಾಹ್ಯ) | **ಸುಪ್ರೀತಿ, ಡಿಇಐ ಮತ್ತು ಪಾಷ್ ಸಮಾಲೋಚಕರು** |